SEPTEMBER 04, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- ಕಲಬುರಗಿ ಜಿಲ್ಲೆಯ, ಮಹತ್ವದ ಎರಡು ನೀರಾವರಿ ಯೋಜನೆಗಳಿಗೆ, ಸಚಿವ ಸಂಪುಟ ಒಪ್ಪಿಗೆ.
- ‘ಪಿ.ಎಂ. ಕುಸುಮ ಸಿ’ ಯೋಜನೆ; ಚಿಕ್ಕಬಳ್ಳಾಪುರದ ಕೃಷಿಕ, ನಾರಾಯಣಸ್ವಾಮಿ, ಸೌರ ವಿದ್ಯುತ್ ಉತ್ಪಾದನೆಯಲ್ಲಿ, ಮಾದರಿ.
- ಧಾರವಾಡದ, ಕೃಷಿ ನವೋದ್ಯಮ ಪೋಷಣ ಕೇಂದ್ರ; ಕೇಂದ್ರ ಕೃಷಿ ಸಚಿವಾಲಯದಿಂದ, 10 ಕೋಟಿ ರೂಪಾಯಿ ಪ್ರೋತ್ಸಾಹ ಧನ.
- ಇಂದು, ಶ್ರೀಕೃಷ್ಣ ಜನ್ಮಾಷ್ಟಮಿ; ನಾಡಿನಾದ್ಯಂತ, ಸಂಭ್ರಮ, ಹಬ್ಬದ ಮೆರಗು.

<><><>

ಈಗ ವಾರ್ತೆಗಳ ವಿವರ

<><><>

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ನಡೆದ ಸಚಿವ ಸಂಪುಟ ಸಭೆ, ಕಲಬುರಗಿ ಜಿಲ್ಲೆಗೆ ಸಂಬಂಧಿಸಿದ, ಒಟ್ಟು 105 ಕೋಟಿ, 20 ಲಕ್ಷ ರೂಪಾಯಿ ಮೊತ್ತದ, ಎರಡು ಮಹತ್ವದ ನೀರಾವರಿ ಯೋಜನೆಗಳಿಗೆ, ಒಪ್ಪಿಗೆ ನೀಡಿದೆ. ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ, ಪ್ರತಿಕ್ರಿಯಿಸಿ, ಕಲಬುರಗಿ ಜಿಲ್ಲೆಯ ನೀರಾವರಿ ಹಾಗೂ ಜಲಸಂರಕ್ಷಣೆ ಮೂಲಸೌಕರ್ಯವನ್ನು, ಈ ನಿರ್ಣಯ ಮತ್ತಷ್ಟು ಬಲಪಡಿಸಲಿದೆ ಎಂದರು. ಬೋರಿ ನದಿಯಿಂದ, ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ, 12 ಕೆರೆಗಳಿಗೆ ನೀರು ತುಂಬಿಸುವ, 56 ಕೋಟಿ ರೂಪಾಯಿ ಮೊತ್ತದ, ಏತ ನೀರಾವರಿ ಯೋಜನೆ ಹಾಗೂ ಕಲಬುರಗಿ ಜಿಲ್ಲೆಯ, ವಿವಿಧ ಭಾಗಗಳಲ್ಲಿ, ಸಣ್ಣ ನೀರಾವರಿ ಹಾಗೂ ಜಲಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲು, 49 ಕೋಟಿ 20 ಲಕ್ಷ ರೂಪಾಯಿ ಮೊತ್ತದ ಯೋಜನೆಯನ್ನು, ಸಚಿವ ಸಂಪುಟ ಅನುಮೋದಿಸಿದೆ ಎಂದು, ನುಡಿದರು.

<><><>

ಮೈಸೂರು ದಸರಾ ಉತ್ಸವಕ್ಕೆ, ದಕ್ಷಿಣ ಭಾರತದ ಎಲ್ಲ ಮುಖ್ಯಮಂತ್ರಿಗಳನ್ನು ಆಹ್ವಾನಿಸಲು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತೀರ್ಮಾನಿಸಿದ್ದಾರೆ. ಮೈಸೂರು ದಸರಾ ಆಯೋಜನೆಯ, ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆವಹಿಸಿ, ಅವರು ಮಾತನಾಡಿದರು. ಕೇಂದ್ರ ರಕ್ಷಣಾ ಖಾತೆ ಸಚಿವರ ಜೊತೆ ಸಮಾಲೋಚಿಸಿ, ಏರ್ ಷೋ, ಡ್ರೋನ್ ಪ್ರದರ್ಶನ, ಇಸ್ರೋ, ಡಿ.ಆರ್.ಡಿ.ಓ. ಸೇರಿದಂತೆ, ನಾಡಿನ ಖ್ಯಾತ ಸಂಸ್ಥೆಗಳಿಂದ ಸ್ತಬ್ಧಚಿತ್ರ ಜಾಥಾ, ಕಲಾ ತಂಡಗಳಿಂದ ಪ್ರದರ್ಶನ ಏರ್ಪಡಿಸಲು ಸಭೆ ನಿರ್ಧರಿಸಿತು.

<><><>

ಪ್ರಧಾನಮಂತ್ರಿ ಕುಸುಮ ಸಿ ಯೋಜನೆ ಅಡಿ, ಚಿಕ್ಕಬಳ್ಳಾಪುರದ, ನಾರಾಯಣಸ್ವಾಮಿ ಅವರ, 40 ಎಕರೆ ಜಮೀನು, ಈಗ ಸಾವಿರಾರು ರೈತರ ಕೃಷಿ ಭೂಮಿಗೆ, ವಿದ್ಯುತ್ ಪೂರೈಸಲು ನೆರವಾಗುತ್ತಿದೆ. ತಮ್ಮ ಜಮೀನನ್ನು ಸೌರ ಯೋಜನೆಗೆ ಗುತ್ತಿಗೆ ನೀಡುವ ಮೂಲಕ, ಅವರು ಸ್ಥಿರ ಆದಾಯದ ಮೂಲವನ್ನು ಕಂಡುಕೊಂಡಿದ್ದಾರೆ. ಜೊತೆಗೆ,

27 ಗ್ರಾಮಗಳ ಕೃಷಿ ಪಂಪ್‌ಸೆಟ್‌ಗಳಿಗೆ, ಹಗಲಿನ ವೇಳೆಯಲ್ಲಿ, ವಿದ್ಯುತ್ ಪೂರೈಕೆ ಕೊಡುಗೆ ನೀಡುತ್ತಿದ್ದಾರೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ರೈತರನ್ನು ಸ್ವಚ್ಛ ಇಂಧನ, ವಿದ್ಯುತ್, ಹಾಗೂ ಹೊಸ ಅವಕಾಶಗಳ ಮೂಲಕ, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೃಷಿಕರನ್ನು ಸಬಲೀಕರಿಸುತ್ತಿದ್ದಾರೆ, ಎಂದು ಶ್ಲಾಘಿಸಿದ್ದಾರೆ.

<><><>

**ಭಾರತೀಯ ತಂತ್ರಜ್ಞಾನ ಸಂಸ್ಥೆ** – ಐ.ಐ.ಟಿ. ಧಾರವಾಡ, ಭಾರತೀಯ ಪಾರಂಪರಿಕ ಜ್ಞಾನ ಪ್ರಣಾಳಿ ಸಮೂಹದ, ಮೂರನೇ ಅಂತಾರಾಷ್ಟ್ರೀಯ ಸಮ್ಮೇಳನವನ್ನು, ನಾಳೆ ಮತ್ತು ನಾಡಿದ್ದು, ಆಯೋಜಿಸಿದೆ ಎಂದು, ಸಂಸ್ಥೆಯ ನಿರ್ದೇಶಕ, ಪ್ರೊಫೆಸರ್ ವೆಂಕಪ್ಪಯ್ಯ ದೇಸಾಯಿ, ತಿಳಿಸಿದ್ದಾರೆ. ಐ.ಐ.ಟಿ. ಧಾರವಾಡದ, ಭಾರತೀಯ ಜ್ಞಾನ ಪದ್ಧತಿಗಳ ಶ್ರೇಷ್ಠತಾ ಕೇಂದ್ರ, ಹೊಸ ದಿಲ್ಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ಅನುಸಂಧಾನ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ, ಕೇಂದ್ರ ಶಿಕ್ಷಣ ಸಚಿವಾಲಯದ ಭಾರತೀಯ ಜ್ಞಾನ ವ್ಯವಸ್ಥೆಗಳ ವಿಭಾಗದ ಸಹಯೋಗದಲ್ಲಿ, ಈ ಕಾರ್ಯಾಗಾರ ನಡೆಯಲಿದೆ. ದೇಶದ ಖ್ಯಾತನ್ಯಾಮ ವಿದ್ವಾಂಸರು ಪಾಲ್ಗೊಳ್ಳಲಿದ್ದಾರೆ, ಎಂದರು.

<><><>

**ಕೇಂದ್ರದ ಕೃಷಿ ಸಚಿವಾಲಯ,** ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ಕೃಷಿ ನವೋದ್ಯಮ ಪೋಷಣ ಕೇಂದ್ರಕ್ಕೆ, 10 ಕೋಟಿ ರೂಪಾಯಿ, ಉತ್ತೇಜನ ನಿಧಿ ನೀಡಿದೆ. ರೈತರ ಆದಾಯ ಹೆಚ್ಚಿಸಲು, ಕೃಷಿಕ ನವೋದ್ಯಮ ಪೋಷಣ ಕೇಂದ್ರ, ಕೃಷಿ ಉದ್ಯಮಿಗಳಿಗೆ ಸೂಕ್ತ ಮಾರ್ಗದರ್ಶನ, ಆರ್ಥಿಕ ನೆರವು ಹಾಗೂ ತಾಂತ್ರಿಕ ನೆರವು ನೀಡುವ ಮೂಲಕ, ಗ್ರಾಮೀಣ ಆರ್ಥಿಕತೆಗೆ ಹೊಸ ಚೈತನ್ಯ ನೀಡುತ್ತಿದೆ. ಕಬ್ಬಿನ ಹಾಲು ವರ್ಷಪೂರ್ತಿ ಕಾಯ್ದಿಡುವ ತಂತ್ರಜ್ಞಾನ, ಕತ್ತೆ ಹಾಲಿನ ಸೋಪು, ಸಜ್ಜೆ ಪೇಯ ಹೀಗೆ, 80ಕ್ಕೂ ಹೆಚ್ಚು ಕೃಷಿ ನವೋದ್ಯಮಗಳು, 158 ಕೋಟಿ ರೂಪಾಯಿ

ವಹಿವಾಟು ದಾಖಲಿಸಿವೆ. ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ, ಕೃಷಿ ನವೋದ್ಯಮ ಪೋಷಣ ಕೇಂದ್ರದ ಮುಖ್ಯಸ್ಥ, ಡಾಕ್ಟರ್ ಎಸ್.ಎಸ್. ಡೊಳ್ಳಿ.

<><><>

ಡಾ. ಎಸ್.ಎಸ್. ಡೊಳ್ಳಿ ಧ್ವನಿ 60 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಇಂದು, ಶ್ರೀಕೃಷ್ಣ ಜನ್ಮಾಷ್ಟಮಿ. ಶ್ರಾವಣಮಾಸದ, ಕೃಷ್ಣ ಪಕ್ಷದ, ಅಷ್ಟಮಿಯಂದು, ವಿಜೃಂಭಣೆಯಿಂದ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಗುತ್ತದೆ. ಬಾಲ ಶ್ರೀಕೃಷ್ಣನನ್ನು ಶೃಂಗರಿಸಿ, ತೊಟ್ಟಿಲಲ್ಲಿ ತೂಗಿ, ಮೃಷ್ಟಾನ್ನ ನೈವೇದ್ಯವನ್ನು ಸಮರ್ಪಿಸಲಾಗುತ್ತದೆ. ವೃಂದಾವನ, ಮಥುರಾ, ದ್ವಾರಕಾದ ಶ್ರೀ ಕೃಷ್ಣ ಮಂದಿರಗಳಲ್ಲಿ, ಮುದ್ದು ಕೃಷ್ಣನ ಜನ್ಮದಿನವನ್ನು, ಭಕ್ತಿಭಾವ ಮತ್ತು ಶ್ರದ್ಧೆಯಿಂದ ಆಚರಿಸಲಾಗುತ್ತಿದೆ. ಮಹಾರಾಷ್ಟ್ರ ಹಾಗೂ ತಮಿಳುನಾಡಿನಲ್ಲಿ, ವಿಶೇಷ ಮೊಸರಿನ ಮಡಕೆಯನ್ನು ಒಡೆಯುವ ದಹಿ ಹಾಂಡಿ ಹಾಗೂ ಉರ್ರೈಡಿ ಸ್ಪರ್ಧೆಗಳು ನಡೆಯಲಿವೆ.

<><><>

ಶ್ರೀಕೃಷ್ಣ ಜನ್ಮೋತ್ಸವಕ್ಕೆ ಉಡುಪಿ ಸಜ್ಜಾಗಿದ್ದು, ರಥಬೀದಿ ಹಾಗೂ ಶ್ರೀಕೃಷ್ಣ ಮಠದ ಸುತ್ತಮುತ್ತ, ಹಬ್ಬದ ವಾತಾವರಣ ಕಳೆಗಟ್ಟಿದೆ. ಪರ್ಯಾಯ ಶಿರೂರು ಮಠದ ಆಶ್ರಯದಲ್ಲಿ, ಈ ಬಾರಿ ವಿಜೃಂಭಣೆಯಿಂದ ಕೃಷ್ಣ ಜನ್ಮಾಷ್ಟಮಿ ಜರುಗಲಿದೆ. ಮಧ್ಯರಾತ್ರಿ 12 ಗಂಟೆ 12 ನಿಮಿಷಕ್ಕೆ, ಶ್ರೀಕೃಷ್ಣನಿಗೆ ಅರ್ಘ್ಯ ಪ್ರದಾನ ನೆರವೇರಿತು.

ನಾಳೆ, ರಥಬೀದಿಯ ವಿಶೇಷ ವೇದಿಕೆಯಲ್ಲಿ, ಸಾಂಪ್ರದಾಯಿಕ ಮಲ್ಲಯುದ್ಧ ಪ್ರದರ್ಶನ ನಡೆಯಲಿದೆ. ರಾಜ್ಯದ ವಿವಿಧೆಡೆಯಿಂದ, ಸಹಸ್ರಾರು ಭಕ್ತರು, ಕನಕ ಕಿಂಡಿಯ ಮೂಲಕ, ಶ್ರೀ ಕೃಷ್ಣನ ದರ್ಶನಕ್ಕಾಗಿ, ಉಡುಪಿಗೆ ಆಗಮಿಸಿದ್ದಾರೆ.

<><><>

**ಗೋಸಲ ವಂಶಜರಿಂದ ಪ್ರತಿಷ್ಠಾಪಿತ,** ಐತಿಹಾಸಿಕ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದ ಜಾತ್ರೆ ಹಾಗೂ ಸ್ತಂಭಾರೋಹಣ, ಯಾದಗಿರಿ ಜಿಲ್ಲೆ, ಸುರಪುರದಲ್ಲಿ, ಇಂದಿನಿಂದ ಮೂರು ದಿನಗಳ ಕಾಲ, ವಿಜೃಂಭಣೆಯಿಂದ ನಡೆಯಲಿದೆ. ಶ್ರಾವಣ ಬಹುಳ ರೋಹಿಣಿ ನಕ್ಷತ್ರದಂದು, ಶ್ರೀಕೃಷ್ಣ ಜನ್ಮಾಷ್ಠಮಿ ಆಚರಿಸುವ ಸಂಪ್ರದಾಯವಿದೆ. ದೇವಸ್ಥಾನದ ಆವರಣದಲ್ಲಿ, ನಾಳೆ, 50 ಅಡಿಗೂ ಹೆಚ್ಚು ಉದ್ದದ ಐದು ಕಂಬಗಳನ್ನು ನೆಟ್ಟು, ಸತತ ಜಾರುವ ಕಂಬಗಳನ್ನು ಏರುವ, ಸಾಂಪ್ರದಾಯಿಕ ಜಾನಪದ ಕ್ರೀಡೆ, ಸಹಸ್ರಾರು ಭಕ್ತಾದಿಗಳನ್ನು ಆಕರ್ಷಿಸುತ್ತದೆ.

<><><>

**ಮೈಸೂರಿನ ನಂಜರಾಜ ಬಹಾದ್ದೂರ ಛತ್ರದಲ್ಲಿ,** ನಾಳೆ ಹಾಗೂ ನಾಡಿದ್ದು, ‘ದೇಸಿ ಸೊಪ್ಪಿನ ಮೇಳ’ ಆಯೋಜಿತವಾಗಿದೆ. ಹೆಗ್ಗಡದೇವನಕೋಟೆಯ, ಕಾಡುಹಳ್ಳಿಯ ರೈತರ, 25 ವಿಧದ ಸೊಪ್ಪುಗಳು, ಕನಕಪುರದ ಕೊಳಗೊಂಡನಹಳ್ಳಿ ಮಹಿಳಾ ಸಂಘದ, ವಿಶೇಷ ಕಳಲೆ ಸಾಂಬಾರು, ಮೇಳದ ಆಕರ್ಷಣೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಮೈಸೂರಿನ ಸಹಜ ಸಮೃದ್ಧದ, ಹಾವೇರಿ ಜಿಲ್ಲೆ, ಶಿಗ್ಗಾಂವ ತಾಲೂಕು, ತಿಮ್ಮಾಪುರದ, ಕ್ಷೇತ್ರ ಸಂಯೋಜಕಿ, ಕಳೆ ಹಾಗೂ ಸಾಗುವಳಿ ಮಾಡದ ಸೊಪ್ಪುಗಳ ಸಂರಕ್ಷಕಿ, ನೀಲಮ್ಮ ಬರದೇಲಿ.

<><><>

**ಕ್ಷೇತ್ರ ಸಂಯೋಜಕಿ ಬಿ.ನೀಲಮ್ಮ ಧ್ವನಿ 50 ಸೆಕೆಂದುಗಳು**

<><><>

**‘ಶಿಕ್ಷಕರ ದಿನಾಚರಣೆ’ ಪೂರ್ವಭಾವಿಯಾಗಿ,** ಬೆಳಗಾವಿ ಜಿಲ್ಲೆಯ ಎಲ್ಲ ತಾಲೂಕುಗಳ, ಒಟ್ಟು 23 ಸ್ಥಳಗಳಲ್ಲಿ, “ಸ್ವಯಂ ಪ್ರೇರಿತ ರಕ್ತದಾನ ಶಿಬಿರ”ವನ್ನು

ಆಯೋಜಿಸಲಾಗಿತ್ತು. ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ, ಪ್ರಾದೇಶಿಕ ಆಯುಕ್ತರಾದ, ಕೆ.ಎಂ. ಜಾನಕಿ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿದರು. ಜಿಲ್ಲಾ ಪಂಚಾಯಿತಿ ಸಿ.ಇ.ಓ. ರಾಹುಲ ಶಿಂಧೆ ಮಾಹಿತಿ ನೀಡಿ, 4 ಸಾವಿರದ 6 ನೂರಾ 34 ಸಾವಿರ ಯೂನಿಟ್ ರಕ್ತ ಸಂಗ್ರಹಿಸಲಾಗಿದೆ, ಎಂದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- ಕಲಬುರಗಿ ಜಿಲ್ಲೆಯ, ಮಹತ್ವದ ಎರಡು ನೀರಾವರಿ ಯೋಜನೆಗಳಿಗೆ, ಸಚಿವ ಸಂಪುಟ ಒಪ್ಪಿಗೆ.
- 'ಪಿ.ಎಂ. ಕುಸುಮ ಸಿ' ಯೋಜನೆ; ಚಿಕ್ಕಬಳ್ಳಾಪುರದ ಕೃಷಿಕ, ನಾರಾಯಣಸ್ವಾಮಿ, ಸೌರ ವಿದ್ಯುತ್ ಉತ್ಪಾದನೆಯಲ್ಲಿ, ಮಾದರಿ.
- ಧಾರವಾಡದ, ಕೃಷಿ ನವೋದ್ಯಮ ಪೋಷಣ ಕೇಂದ್ರ; ಕೇಂದ್ರ ಕೃಷಿ ಸಚಿವಾಲಯದಿಂದ, 10 ಕೋಟಿ ರೂಪಾಯಿ ಪ್ರೋತ್ಸಾಹ ಧನ.
- ಇಂದು, ಶ್ರೀಕೃಷ್ಣ ಜನ್ಮಾಷ್ಟಮಿ; ನಾಡಿನಾದ್ಯಂತ, ಸಂಭ್ರಮ, ಹಬ್ಬದ ಮೆರಗು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>